ದಿನಾಂಕ 23.07.2025 ರಂದು ಸಾಕ್ಷಿಗೆ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಡಿ.ಬಿ. ವಕೀಲರಿಂದಃ-

1. ನಾನು ಕೂಲಿ ಕೆಲಸ ಮಾಡುತ್ತೇನೆ. ನನ್ನ ಊರು ಮಂಚಿಕೊಪ್ಪ ಗ್ರಾಮ. ನನಗೆ ಪ್ರತಿವಾದಿ ಹಾಲಮ್ಮರವರ ಮಗ ಚಂದ್ರಪ್ಪರವರ ಪರಿಚಯ ಇದೆ. ಸದಾನಂದಪ್ಪರವರು ನನ್ನ ನೆರೆಮನೆಯವರು , ಸದರಿಯವರು ನನ್ನ ಸಂಬಂಧಿಕರು ಅಲ್ಲ. ನನ್ನ ಅಕ್ಕನ ಹೆಸರು ರತ್ನಮ್ಮ. ಅವರನ್ನು ತಳಬೈಲು ಊರಿಗೆ ಮದುವೆ ಮಾಡಿಕೊಡಲಾಗಿದೆ. ಇನ್ನೊಬ್ಬ ಸಹೋದರಿಯನ್ನು ಹುಣವಳ್ಳಿ ಗ್ರಾಮದ ವ್ಯಕ್ತಿಗೆ ಮದುವೆ ಮಾಡಿಕೊಡಲಾಗಿದೆ. ನನಗೆ ಇವರಿಬ್ಬರನ್ನು ಹೊರತುಪಡಿಸಿ ಇನ್ನೋರ್ವ ಸಹೋದರಿಯನ್ನು ಇದ್ದಾರೆ ಎಂದರೆ ಸರಿಯಲ್ಲ. ನನ್ನ ಇನೊಬ್ಬ ಸಹೋದರಿಯನ್ನು ವಾದಿಗೆ ಮದುವೆ ಮಾಡಿಕೊಡಲಾಗಿದೆ , ವಾದಿಯು ನನ್ನ ಮಾವ ಎಂದರೆ ಸರಿಯಲ್ಲ. ಸತ್ಯ ಸಂಗತಿಯನ್ನು ಹೇಳಿದರೆ ನನ್ನ ಮಾವನಿಗೆ ತೊಂದರೆ ಆಗುತ್ತದೆ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದಾನಂದಪ್ಪ ಮತ್ತು ನನಗೆ ಸಂಬಂಧ ಇಲ್ಲ ಎಂದರೆ ಸಾಕ್ಷಿಯು ನನಗೆ ಸದಾನಂದಪ್ಪರವರು ಮಾವನಾಗಬೇಕು ಆದರೆ ನನಗೆ ಸಂಪರ್ಕ ಇಲ್ಲ ಎಂದು ನುಡಿಯುತ್ತಾರೆ.

2. ಸದಾನಂದಪ್ಪರವರು ಯಾವ ರೀತಿಯಲ್ಲಿ ನನಗೆ ಮಾವನಾಗಬೇಕು ಎಂದರೆ ಸಾಕ್ಷಿಯು ನನ್ನ ತಂದೆ ಸಂಬಂಧಿಕರು ಎಂದು ನುಡಿಯುತ್ತಾರೆ. ನಾನು ಸದರಿಯವರ ಮನೆಗೆ ಹೋಗಿ ಬಂದು ಮಾಡುವುದಿಲ್ಲ. ಸದಾನಂದಪ್ಪರವರೊಂದಿಗೆ ನನ್ನ ಮಾತುಕತೆ ಇರುವುದಿಲ್ಲ. ಸದಾನಂದಪ್ಪರವರು ದಾವೆ ಹಾಕಿರುವ ವಿಚಾರ ನನಗೆ ಗೊತ್ತು . ಸದರಿ ದಾವೆಯನ್ನು ಜಾಗದ ವಿಚಾರಕ್ಕಾಗಿ ಹಾಕಿರುತ್ತಾರೆ. ಸದರಿ ದಾವೆಯಲ್ಲಿ ಯಾವ ವಿಷಯಕ್ಕಾಗಿ ದಾವೆಯನ್ನು ದಾಖಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾದಿಯು ಹೊಸದಾಗಿ ಮನೆಯನ್ನು ನಿರ್ಮಿಸಿರುತ್ತಾರೆ ಎಂದರೆ ಸರಿ. ಸದರಿಯವರು ಈಗ ನಿರ್ಮಿಸಿರುವ ಹೊಸಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸಾಕ್ಷಿಯು ಅವರು ತಮ್ಮ ಹಳೇ ಮನೆ ಹಾಗೂ ಹೊಸಮನೆಯಲ್ಲಿ ವಾಸಿಸುತ್ತಾರೆ ಎಂದು ನುಡಿಯುತ್ತಾರೆ. ವಾದಿಯು ಈಗ ನಿರ್ಮಿಸಿರುವ ಹೊಸ ಮನೆಯಲ್ಲಿ ವಾಸವಿರುತ್ತಾರೆ , ಹಳೇ ಮನೆಯಲ್ಲಿ ವಾಸವಿರುವುದಿಲ್ಲ ಎಂದರೆ ಸರಿಯಲ್ಲ. ಸದಾನಂದಪ್ಪರವರು ನನಗೆ ಮಾವನಾಗಬೇಕು ಆದಕಾರಣ ಅವರಿಗೆ ಅನುಕೂಲ

ಮಾಡಿಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯ ಮಕ್ಕಳೊಂದಿಗೆ ಉತ್ತಮ ಸಂಬಂಧವನ್ನು ಹೊಂದಿರುತ್ತೇನೆ ಎಂದರೆ ಸಾಕ್ಷಿಯು ಕೇವಲ ಒಬ್ಬ ಮಗನೊಂದಿಗೆ ಮಾತ್ರ ಉತ್ತಮ ಸಂಬಂಧವನ್ನು ಹೊಂದಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ ದಾವೆಯ ಕುರಿತು ಯಾವುದೇ ಮಾಹಿತಿ ಇಲ್ಲದೇ ಇದ್ದರೂ ವಾದಿಯ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಪ್ರತಿವಾದಿಯ ಸ್ವತ್ತಿನ ಸಂಖ್ಯೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ತನ್ನ ಸ್ವತ್ತಿನಲ್ಲಿ ಸ್ವಲ್ಪ ಭಾಗವನ್ನು ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಯಾರಿಗೆ ಯಾವಾಗ ಮಾರಾಟ ಮಾಡಿದರು ಎನ್ನುವ ಮಾಹಿತಿ ಇಲ್ಲ.

ಓ.ಹೇ.ಕೇ.ಸರಿಯಿದೆ.

( ಮರು ವಿಚಾರಣೆ ಇಲ್ಲ)
(ತೆ.ನ್ಯಾ.ಸಾ.ಹೇ.ಬೆ.ಮಾಡಲಾಯಿತು).

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಶಿಕಾರಿಪುರ.